ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ:–ಸಿ3(7)ಪ್ರಾ.ಶಿ.ವರ್ಗ 01/2016–17 ದಿ: 21/10/2016

**ಜ್ಞಾಪನ**

ವಿಷಯ: 2016–17 ನೇ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಕೋರಿಕೆ ಮೇರೆಗೆ ಕೌನ್ಸಿಲಿಂಗ್ ಮೂಲಕ ಅಂತರ್‌ಘಟಕ ವರ್ಗಾವಣೆ ಬಗ್ಗೆ:

******

**ಸರ್ಕಾರಿ ಪ್ರಾಥಮಿಕಶಾಲಾ ಸಹಶಿಕ್ಷಕರ ಅಂತರ ಘಟಕ – ವರ್ಗಾವಣೆ ಕೌನ್ಸಿಲಿಂಗ್ ವೇಳಾಪಟ್ಟಿ**

## ಸೂಚನೆ: ದಿನಾಂಕ: 23/10/2016 ರ ಭಾನುವಾರ ವರ್ಗಾವಣಾ ಕೌನ್ಸಿಲಿಂಗ್ ನಡೆಯುವುದಿಲ್ಲ.

| ಕ್ರ ಸಂ | ದಿನಾಂಕ | ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಕ್ರಮಸಂಖ್ಯೆಗಳಂತೆ |
|---|---|---|
| 1 | 24/10/2016 ಸೋಮವಾರ | 6501 ರಿಂದ 6900 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| 2 | 25/10/2016 ಮಂಗಳವಾರ | 6901 ರಿಂದ 7300 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| 3 | 26/10/2016 ಬುಧವಾರ | 7301 ರಿಂದ 7700 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| 4 | 27/10/2016 ಗುರುವಾರ | 7701 ರಿಂದ 8083 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |

**ಕೌನ್ಸಿಲಿಂಗ್ ನಡೆಯುವ ಸ್ಥಳ:**

**1. ಬೆಂಗಳೂರು ವಿಭಾಗ – ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು –02**

**2. ಮೈಸೂರು ವಿಭಾಗ – ಸಹನಿರ್ದೇಶಕರ ಕಛೇರಿ , ಸಾ.ಶಿ.ಇಲಾಖೆ, ರಾಮಸ್ವಾಮಿ ಸರ್ಕಲ್, ಮೈಸೂರು**

**3. ಕಲಬುರ್ಗಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ ಕಲಬುರ್ಗಿ.**

**4. ಬೆಳಗಾವಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಡಯಟ್ ಸಭಾಂಗಣ, ಧಾರವಾಡ .**

**ಬೆಳಿಗ್ಗೆ: 09–30 ರಿಂದ ಪ್ರಾರಂಭ.**

**ಕೌನ್ಸಿಲಿಂಗ್‌ನಲ್ಲಿ ಹಾಜರಾಗುವ ಶಿಕ್ಷಕರುಗಳು ಬಿ.ಇ.ಓ ಇವರಿಂದ ಅನುಮೋದಿತ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವುದು.**

1. ವರ್ಗಾವಣೆಯ ಅರ್ಜಿ ಬಿ.ಇ.ಓ ಅನುಮೋದಿತ ಪ್ರತಿ ಮತ್ತು ಸೇವಾ ದೃಢೀಕರಣ ಪತ್ರ.
2. ನೇಮಕಾತಿ ಆದೇಶ ಪತ್ರ ಮತ್ತು ಕಳೆದ ಬಾರಿ ವರ್ಗಾವಣೆ ಪಡೆದಿದ್ದಲ್ಲಿ ವರ್ಗಾವಣಾ ಆದೇಶದ ಪ್ರತಿ.
3. ಶಿಕ್ಷಕರ ಇತ್ತೀಚಿನ ಹೆಚ್.ಆರ್. ಎಂ.ಎಸ್ ವೇತನ ಪತ್ರ.
4. ಗುರುತಿನ ಪತ್ರ , ಮತದಾರರ ಚೀಟಿ, ಆಧಾರ್ ಕಾರ್ಡ್
5. ವರ್ಗಾವಣೆ ಅಧಿನಿಯಮ ಜಾರಿಗೆ ಬಂದನಂತರ ಇದೇ ಮೊದಲನೇ ಬಾರಿಗೆ ಘಟಕದ ಹೊರಗೆ ವರ್ಗಾವಣೆ ಪಡೆಯುತ್ತಿದ್ದೇನೆ ಎಂಬ ಬಗ್ಗೆ ಮುಚ್ಚಳಿಕೆ ಪತ್ರ
6. **ಶಿಕ್ಷಕರ ಸಂಘದ/ಸರ್ಕಾರಿ ನೌಕರರ ಸಂಘದ ಚುನಾಯಿತ ಪ್ರತಿನಿಧಿಯಾಗಿದ್ದಲ್ಲಿ ಮಾತ್ರ ಸಂಬಂಧಪಟ್ಟ ಪ್ರಾಧಿಕಾರ ನೀಡಿರುವ ಪ್ರಮಾಣ ಪತ್ರ. ಶಿಕ್ಷಕರು ಯಾವ ಘಟಕದಲ್ಲಿ ಚುನಾಯಿತರಾಗಿದ್ದಾರೆಂಬ ಬಗ್ಗೆ ದೃಢೀಕರಣ ಪತ್ರ.**
7. ಕೆ.ಎ.ಟಿ ಯಿಂದ ಮಧ್ಯಂತರ ಆದೇಶವನ್ನು ಪಡೆದಿರುವ ಎಸ್.ಎಸ್.ಎ ಸಹಶಿಕ್ಷಕರು/ಎಸ್.ಎಸ್.ಎ–ಟಿ.ಜಿ.ಟಿ ಶಿಕ್ಷಕರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವಾಗ ನ್ಯಾಯಾಲಯದ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುವುದು.

ಸಹಿ/–

(ಕೆ. ಆನಂದ )

**ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)**

ಹಾಗೂ ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರಿಗಳು,